ಶ್ರೀ ಕೆ.ಹೆಚ್. ರಂಗನಾಥ್ : ಹಾಗಾದರೆ ನನಗೂ ಒಂದು ಹತ್ತಿಪ್ಪತ್ತು ಲಕ್ಷ ರೂಪಾಯಿ ಬೇಕು. ಕೊಡಿ ಸ್ವಾಮಿ... ಕೊಡ್ತೀರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೊಡೋದಿದ್ದರೆ ಕೊಡಿಸೋಣ....

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಹೆಚ್. ರಂಗನಾಥ್: ತಮಿಳಿನಲ್ಲಿ ಒಂದು ಗಾದೆ ಮಾತಿದೆ ಪುಳ್ಳಕ್ಕೋರು ರಾಮಕೃಷ್ಣ ಎಂದು ಹಾಗಾಗಿದೆ ನಮ್ಮ ಲೆಕ್ಕಾಚಾರ

ವಿಷಯ: ಮೈಸೂರಿನ ತಗಡೂರು ರಾಮಚಂದ್ರರಾಯರ ವೃತ್ತದ ಬಳಿ ಬಾರ್ ಅಂಡ್ ರೆಸ್ಟೋರೆಂಟ್ ಪ್ರಾರಂಭಿಸಿರುವ ಬಗ್ಗೆ

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೇ, ಮೈಸೂರು ಮಹಾನಗರದಲ್ಲಿ ಚಾಮುಂಡಿಪುರಂ ನಲ್ಲಿರುವ ತಗಡೂರು ರಾಮಚಂದ್ರರಾಯರ ವೃತ್ತದಲ್ಲಿ ಜೂನ್ 8ನೇ ತಾರೀಖು ಬೇರೆ ಕಡೆಯಲ್ಲಿದ್ದಂಥ ಬಾರ್ ಅಂಡ್ ರೆಸ್ಟೋರೆಂಟ್‌ನ್ನು ಲೋಟೋಸ್ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ಈ ವೃತ್ತಕ್ಕೆ ಶಿಫ್ಟಿಂಗ್‌ನ್ನು ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮೇ 27ನೇ ತಾರಿಖಿಗೆ ಅಲ್ಲಿಯ ಅಬಕಾರಿ ಡಿ.ಸಿ.ಯವರ ಗಮನಕ್ಕೆ ವಿಚಾರವನ್ನು ತಂದು ಈ ಪ್ರದೇಶದ ಪೂರ್ತಿ ಜನಗಳ ವಿರೋಧ ಇದ್ದರೂ ಕೂಡ ತಗಡೂರು ರಾಮಚಂದ್ರರಾಯರ ಪ್ರತಿಮೆಯ ಮುಂದೆ ಇದು ಆಗಬಾರದು ಎಂಬ ವಿಚಾರವನ್ನು ಅವರ ಮುಂದಿಟ್ಟಾಗ ನಾವು ಯಾವುದೇ ಪರ್ಮಿಶನ್ ಕೊಟ್ಟಿಲ್ಲ, ತಾವುಗಳು ಶಾಸಕರಾಗಿ ಒಂದು ಪತ್ರವನ್ನು ಬರೆದುಕೊಡಿ ಎಂದು ಹೇಳಿದರು. 29ನೇ ತಾರೀಖಿಗೆ ಇದಕ್ಕೆ ಸಂಬಂಧಪಟ್ಟ ಹಾಗೆ ಅಬಕಾರಿ ಡಿಸಿ ಯವರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಆದರೆ ನಾನು ಪತ್ರವನ್ನು ಬರೆಯುವುದಕ್ಕೆ ಮುಂಚೆ ಒಂದು ವಾರದ ಹಿಂದಿನ ಡೇಟ್ ಹಾಕಿ ಶಿಫ್ಟಿಂಗ್ ಮಾಡುವ ವ್ಯವಸ್ಥೆಯಾಗಿದೆ. ಶಿಫ್ಟಿಂಗ್‌ಗೆ ಅನುಮತಿ ಕೊಡುವಂಥ ಸಂದರ್ಭದಲ್ಲಿ ಕೂಗಬಾರದೆಂಬ ನನ್ನ ಮನವಿಯಿದ್ದರೂ ಕೂಡ ಎಲ್ಲರ ವಿರೋಧವಿದ್ದರೂ ಕೂಡ ಯಾರದ್ದೂ ವಿರೋಧವಿಲ್ಲದ ಕಾರಣ ಕೊಡಲಾಗಿದೆ ಎಂದು ಹೇಳಿ, ಅವರ ಆದೇಶದಲ್ಲಿ ಕೂಡ ಇದೆ. ಇನ್ನೊಂದು ಪ್ರಮುಖವಾಗಿ ಅಬಕಾರಿ ಆಕ್ಟ್‌ನಲ್ಲಿ ಲೋಕಲ್ ಬಾಡಿಯ ಎನ್‌ಓಸಿ ಯು ತುಂಬಾ ಅವಶ್ಯಕವಾಗಿರುತ್ತದೆ. ಆ ಎನ್‌ಓಸಿ ಕೂಡಲೇ ಬೇಕಾದಂಥ ಒಂದು ಪರಿಸ್ಥಿತಿಯು ಬಂದಾಗ ಏನ್‌ಓಸಿಯನ್ನು ಫೇಕ್ ಎನ್‌ಓಸಿಯನ್ನು ಫೋರ್ಜ್ ಮಾಡಿ ಕೊಟ್ಟು ಶಿಫ್ಟ್ ಮಾಡುವಂಥ ಕೆಲಸವನ್ನು ಮಾಡಲಾಗಿದೆ. ನಾನು ಇದಕ್ಕೆ ಸಂಬಂಧಪಟ್ಟ ಹಾಗೆ 20-6-02 ರಲ್ಲಿ ನಗರ ಪಾಲಿಕೆಯ ಆಯುಕ್ತರಿಗೆ ಒಂದು ಪತ್ರವನ್ನು ಬರೆದಿದ್ದೆ. ಆ ಪತ್ರಕ್ಕೆ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಪತ್ರದ ಸಂಖ್ಯೆ: ಹೆಚ್.-3, ಪಿಆರ್: ಎನ್‌ಸಿ 1262,-2-3, ಇದರ ಪ್ರಕಾರದಲ್ಲಿ ನಾವು ಯಾವುದೇ ಎನ್‌ಓಸಿ ಯನ್ನು ಕೊಟ್ಟಿಲ್ಲ. ತಮಗೆ ಎನ್‌ಓಸಿ ಬೇಕೆಂದು ಅರ್ಜಿಯೂ ಕೂಡ ನಮ್ಮಲ್ಲಿ ಬಂದಿಲ್ಲ. ಹಾಗೆಯೇ ಇದಕ್ಕೆ ಸಂಬಂಧ ಪಟ್ಟಂಥ ಯಾವುದೇ ಕಡತಗಳು ನಗರಪಾಲಿಕೆಯಲ್ಲಿಲ್ಲ. ಇನ್ನೊಂದು ವಿಚಾರ ಅಂದರೆ, ಶಿಫ್ಟಿಂಗ್‌ಗೆ ಬೇಕಾಗಿರುವಂಥ ನಗರ ಪಾಲಿಕೆಗೆ ಕಟ್ಟ ಬೇಕಾದಂಥ 4300 ರೂಪಾಯಿಗಳನ್ನು ನಗರಪಾಲಿಕೆಗೆ ಕಟ್ಟಿಲ್ಲ. ಯಾವುದೇ ಅಂಥ ಚಲನ್ ಇಲ್ಲಿ ಇಲ್ಲ ಎಂದು ನಗರಪಾಲಿಕೆ ನನಗೆ ಎಂಡಾರ್ಸ್‌ಮೆಂಟ್‌ನ್ನು ಕೊಟ್ಟಿದ್ದನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಅದರ ಹಿಂದಿನ ಏಕೈಸ್ ಡಿ.ಸಿ. ಈ

ಫೇಕ್ ರೆಕಾರ್ಡ್‌ನ್ನು ಸೃಷ್ಟಿ ಮಾಡಿ ಕೊಟ್ಟಂಥ ಅರ್ಜಿಯನ್ನು ವೆರಿಫಿಕೇಶನ್ ಕೂಡ ಮಾಡದೆ ಅವರಿಗೆ ಬಾರ್ ಅಂಡ್ ರೆಸ್ಟಾರೆಂಟ್‌ನ್ನು ಶಿಫ್ಟ್ ಮಾಡಲಿಕ್ಕೋಸ್ಕರವಾಗಿ ಅನುಮತಿ ನೀಡಿದ್ದಾರೆ. ಇದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಲಕ್ಷಾಂತರ ರೂಪಾಯಿಗಳ ಹಣದ ಅವ್ಯವಹಾರವನ್ನು ಹಿಂದಿನ ಅಬಕಾರಿ ಡಿ.ಸಿ. ಮಾಡಿದ್ದಾರೆಂಬುದು ಎಲ್ಲಾ ಸಾರ್ವಜನಿಕರಿಗೂ ತಿಳಿದಿರುವಂಥ ವಿಷಯ. ಸಾರ್ವಜನಿಕರ ಪ್ರತಿಭಟನೆ ಇದ್ದಾಗಲೂ ಕೂಡ ಬಾರ್ ಅಂಡ್ ರೆಸ್ಟಾರೆಂಟ್‌ನ್ನು ಇಂಥ ಒಂದು ಸರ್ಕಲ್‌ನಲ್ಲಿ ಅದರಲ್ಲಿಯೂ ಪ್ರಮುಖವಾಗಿ ರೆಸಿಡೆನ್ಸ್‌ಷಿಯಲ್ ಏರಿಯಾದಲ್ಲಿ ಕೊಟ್ಟಿರುವಂಥಾದ್ದು ಬಹಳ ತಪ್ಪು ದಯಮಾಡಿ ಇದಕ್ಕೆ ಸಂಬಂಧಪಟ್ಟ ಹಾಗೆ ಫೇಕ್ ರೆಕಾರ್ಡ್‌ನ್ನು ಕೊಟ್ಟಂಥ ಯಾವ ಅಧಿಕಾರಿ ಇದ್ದಾರೆ ಅವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಿಂದಿನ ಯಾರು ಅಬಕಾರಿ ಡಿ.ಸಿ. ಇದ್ದರು ಈ ಫೇಕ್ ರೆಕಾರ್ಡ್‌ನ ಮೇಲೆ ಶಿಫ್ಟಿಂಗ್‌ನ್ನು ಯಾರು ಮಾಡಿದ್ದಾರೆ ಅವರನ್ನು ತತ್‌ಕ್ಷಣವೇ ಅಮಾನತ್ತಿನಲ್ಲಿಡಬೇಕು, ಮತ್ತು ಬಾರ್ ಅಂಡ್ ರೆಸ್ಟಾರೆಂಟ್‌ನ್ನು ತತ್‌ಕ್ಷಣದಿಂದಲೇ ಕ್ಲೋಸ್ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ಸಚಿವರು): ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಸಂಪೂರ್ಣವಾದಂಥ ಮಾಹಿತಿಗಳು ಈಗ ಇಲ್ಲ. ಮಾನ್ಯ ಸದಸ್ಯರು ಏನು ಆರೋಪಗಳನ್ನು ಮಾಡಿದ್ದಾರೆ ಅದರ ಬಗ್ಗೆ ಸಂಪೂರ್ಣವಾದ ವಿಚಾರಣೆಯನ್ನು ಮಾಡಿ, ನಾನು ಅವರಿಗೆ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಎ. ರಾಮದಾಸ್: ಈ ಬಗ್ಗೆ ಒಂದು ಎನ್‌ಕ್ವಾಯರಿಯನ್ನು ಮಾಡಿ ಇಲಾಖೆಯ ಸರ್ಟಿಫಿಕೇಟನ್ನು ಫೇಕ್ ಮಾಡಿದ್ದಾರೆ. ಅದನ್ನು ವಿಚಾರಣೆಗೆ ಒಳಪಡಿಸಿ. ಡಿಪಾರ್ಟ್‌ಮೆಂಟಲ್ ಎನ್‌ಕ್ವಾಯರಿಯನ್ನಾದರೂ ಮಾಡಿ.

ಶ್ರೀ ಎಂ. ಎಂ. ನಾಣಯ್ಯ: ವಿವರಗಳನ್ನು ಪಡೆದು ತಮಗೆ ಸೂಕ್ತವಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಎ. ರಾಮದಾಸ್: ನನ್ನ ಕ್ಷೇತ್ರದಲ್ಲಿ ಪ್ರಮುಖ ಸ್ಥಳದಲ್ಲಿ ಇರತಕ್ಕಂಥ ಬಾರ್ ಅಂಡ್ ರೆಸ್ಟಾರೆಂಟ್‌ನ್ನು ಕ್ಲೋಸ್ ಮಾಡಲು ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು: ಸಂಪೂರ್ಣವಾದ ಮಾಹಿತಿಗಳನ್ನು ತರಿಸಿಕೊಂಡು ತಮಗೆ ಉತ್ತರ ಕೊಡುತ್ತೇವೆ ಎಂದು ಹೇಳಿದ್ದಾರಲ್ಲವೇ?

ಶ್ರೀ ಎಂ.ಎಂ. ನಾಣಯ್ಯ: ಸನ್ಮಾನ್ಯ ಅಧ್ಯಕ್ಷರೇ, ಅದು ನಮ್ಮ ಅಬಕಾರಿ ಕಾಯಿದೆಗೆ ವಿರೋಧವಾಗಿದ್ದರೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಅದನ್ನು ಸ್ಥಳಾಂತರ ಮಾಡಲು ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು: ಮುಂದೆ ಗಮನ ಸೆಳೆಯುವ ಸೂಚನೆ.

12.40 ಪಿ.ಎಂ.

(4) ಗಮನ ಸೆಳೆಯುವ ಸೂಚನೆ

ವಿಷಯ: ರಾಷ್ಟ್ರೀಯ ಕುಟುಂಬ ಸಹಾಯಧನ ಯೋಜನೆಯಲ್ಲಿ ಸರ್ಕಾರದಿಂದ ಸಿಗುವ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದವರಿಗೆ ಅನುದಾನ ಬಿಡುಗಡೆಯಾಗದೇ ಇರುವ ಬಗ್ಗೆ